ಸುದ್ದಿ ಚಾನೆಲ್‌ಗಳಂತೂ ಇಡೀ ಪರದೆಯ ಎಡಬಲ, ಮೇಲೆ ಕೆಳಗೆ ಬೇರೆ ಬೇರೆ ಪಟ್ಟಿಕೆಗಳಲ್ಲಿ ಸುದ್ದಿ ಕೊಡುತ್ತಿರುತ್ತವೆ. ಪತ್ರಿಕೆಗಳು ಕೂಡ ಇವತ್ತು ಪುಟ ತುಂಬ ಚಿಕ್ಕ ಚಿಕ್ಕ ಚಿತ್ರಾನ್ನದಂಥ ತುಣುಕುಗಳಿಂದಲೇ ತುಂಬಿ ತುಳುಕುವುದು ಜನಪ್ರಿಯತೆಗೆ ಸರಳ ಸಾಧನ ಎಂದು ನಂಬಿದಂತಿವೆ. ದಿನ ಪತ್ರಿಕೆಯೊಂದು ತಾನು ಪ್ರತಿದಿನ ಐವತ್ತಕ್ಕೂ ಹೆಚ್ಚು ಬಗೆಯ ಕಾಲಮ್ಸ್ ಕೊಡುತ್ತಿದ್ದೇನೆ ಎಂದು ಎದೆಯುಬ್ಬಿಸಿದ್ದು ನೆನಪಿದೆ. ದಿನಪತ್ರಿಕೆಯೊಂದು ನೆಟ್ಟಗೆ ಸುದ್ದಿ ಕೊಟ್ಟರೆ ಸಾಲದೆ ಎಂಬ ಕಾಲ ಹೋಯಿತು. ಅಲ್ಲಿ ಸುದ್ದಿಯ ಸ್ಥಾನವನ್ನು 'ಸ್ಟೋರಿ' ಕಬಳಿಸಿದಂತೆಯೇ ವಸ್ತುನಿಷ್ಠತೆಯನ್ನು ಮಸಾಲೆ ಆವರಿಸಿದ್ದು ಕಾಣುತ್ತದೆ. ಆದರೆ ಅಜೀರ್ಣವಾಗುವಷ್ಟು ಮಾಹಿತಿ, ಮನರಂಜನೆ, ಜ್ಞಾನ ಲಭ್ಯವಿದ್ದರೆ ಸಾಕೆ, ಅದನ್ನೆಲ್ಲ ಆಪೋಶನ ತೆಗೆದುಕೊಳ್ಳುವ ಸಾಮರ್ಥ್ಯವಿರುವ ಅಗಸ್ತ್ಯರೆಲ್ಲಿದ್ದಾರೆ! ತುಂಬ ಹಿಂದೆ ಸಂಗೀತಗಾರ ಭಾಸ್ಕರ ಚಂದಾವರ್ಕರ್ ಒಂದು ಸೆಮಿನಾರಿನಲ್ಲಿ ಸಂಗೀತ ಹೇಗೆ ಮಾರುಕಟ್ಟೆ ಸರಕಾಗಿ ಬದಲಾಗಿದೆ ಎನ್ನುವುದನ್ನು ವಿವರಿಸುತ್ತ ಹೇಳಿದ ಮಾತುಗಳು ನೆನಪಾಗುತ್ತವೆ. ಬಿಟ್ ಟು ಬಿಟ್ ಬಡಿತಗಳಿರುವ ಇರುವ ಪಾಶ್ಚಾತ್ಯ ಸಂಗೀತ ಮತ್ತು ಆಲಾಪದ ನೆಲೆಯಲ್ಲಿರುವ ಭಾರತೀಯ ಸಂಗೀತವನ್ನು ಹೋಲಿಸುತ್ತ ನಮ್ಮದು ಧ್ಯಾನವನ್ನು, ಏಕಾಗ್ರತೆಯನ್ನು, ತಲ್ಲೀನತೆಯನ್ನು ನೆಚ್ಚಿದ್ದರೆ ಅವರದ್ದು ವಿಚ್ಛಿದ್ರವನ್ನೇ ವಿಜೃಂಭಿಸುವುದು ಎಂಬರ್ಥದ ಮಾತನ್ನಾಡಿದ್ದರು. ಈ ಬಗೆಯ ಸಂಗೀತ ತನ್ನ ದೃಶ್ಯಸಾಧ್ಯತೆಗಳತ್ತ ಹೊರಳಿದಾಗ ಪ್ರತಿ ಸೆಕೆಂಡಿಗೊಮ್ಮೆ ಚಕಚಕನೆ ದೃಶ್ಯ ಬದಲಿಸುವ, ಬೆಳಕಿನ ಬಣ್ಣ ಬದಲಿಸುವ, ಝೂಮ್ ಮತ್ತು ಕ್ಲೋಸಪ್‌ಗಳಿಂದ ಮೆದುಳನ್ನು ತಬ್ಬಿಬ್ಬಾಗಿಸುವ ಸಂಗೀತವನ್ನೇ ನಮಗೆ ಕೊಡಬೇಕಾಯಿತು. ಎಂಟೀವಿಯಂಥ ಚಾನೆಲ್ಲು ಸಂಗೀತವನ್ನು ಉಣಬಡಿಸುತ್ತಿರುವ ಬಗೆ ಗಮನಿಸಿದವರಿಗೆ ಇದು ಅರ್ಥವಾಗುತ್ತದೆ. ಇಂಥ ದೃಶ್ಯವೈಭವಕ್ಕೆ ನಮ್ಮ ಹಿಂದೂಸ್ತಾನೀ ಆಲಾಪ್ ಒಗ್ಗುವುದುಂಟೆ?

ಒಟ್ಟಾರೆಯಾಗಿ ಉಳಿದೆಲ್ಲಾ ಕಲೆಗಳನ್ನು ಮಾಡಿದಂತೆಯೇ ಸಾಹಿತ್ಯವನ್ನು ಕೂಡ ಮಾರ್ಕೆಟ್ ಕೇಂದ್ರಿತ ಸರಕನ್ನಾಗಿ ಬದಲಿಸುವಲ್ಲಿ ಕಾಲದ ಮಹಾತ್ಮೆ ದೊಡ್ಡದು ಮತ್ತು ಅದು ಯಶಸ್ವಿಯಾಗಿರುವುದನ್ನು ಕಾಣುತ್ತೇವೆ. ಅದು ಅಷ್ಟನ್ನೇ ಮಾಡಿದ್ದರೆ ಸಾಕಿತ್ತು. ಆದರೆ ಅದು ತನ್ನ ಭರಾಟೆಯಲ್ಲಿ ಮೆದುಳಿನ ಗ್ರಹಿಕೆಯ ಲಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅದರ ಏಕಾಗ್ರತೆಯನ್ನು ನಾಶಪಡಿಸಿರುವುದು ಸುಳ್ಳೆ?

ಈಚೆಗೆ ಜೆಸಿಬಿಯಂಥ ಒಂದು ಸಂಸ್ಥೆ ಬಿರ್ಲಾ ಸಂಸ್ಥೆಯ ಜ್ಞಾನಪೀಠವನ್ನು ಮೀರಿಸುವುದೇ ಗುರಿ ಎಂಬಂತೆ ಇಪ್ಪತ್ತೈದು ಲಕ್ಷದ (ಕೊನೆಯ ಸುತ್ತಿನ ಎಲ್ಲಾ ಕೃತಿಗಳಿಗೂ ಲಕ್ಷದ) ಪ್ರಶಸ್ತಿಯನ್ನು ಸ್ಥಾಪಿಸಿರುವುದು ಇದಕ್ಕೊಂದು ರೂಪಕದಂತಿದೆ. ಸಾಹಿತಿಗಳಿಗೂ ಇವತ್ತು ಪ್ರಚಾರ, ಮಾಧ್ಯಮದ ಆಕರ್ಷಣೆ, ಸುದ್ದಿಯಲ್ಲಿರುವ ಗೀಳು ಹೆಚ್ಚಿದೆ. ಅವನು ಮಾತಲ್ಲಿ ಏಕಾಂತ, ತನ್ನ ಪಾಡಿಗೆ ತಾನು ಎಂಬೆಲ್ಲ ಡಯಲಾಗು ಹೊಡೆಯುತ್ತಲೇ ಇದನ್ನು ಮಾಡುತ್ತಿರುವುದು ನಿಜ. ಅವಕಾಶ ಸಿಕ್ಕಿದ್ದೇ ಅವನಿಗೇನು ಸಿಕ್ಕಿತು, ಯಾವ ಕಾರಣಕ್ಕಾಗಿ ಸಿಕ್ಕಿತು, ನನಗೇಕೆ ಅದು ಸಿಗಲಿಲ್ಲ ಎಂಬ ತರ್ಕದಲ್ಲಿ ಸಾಹಿತಿ ಹೆಚ್ಚು ವ್ಯಸ್ತ. ತನ್ನ ತರ್ಕಕ್ಕೆ ಜಾತಿ, ಲಿಂಗ, ಪ್ರದೇಶ, ಧರ್ಮ ಎಲ್ಲವನ್ನೂ ಅವನು ಎಳೆದು ತರಬಲ್ಲ. ಮುಖ್ಯ ಮುದ್ದೆ ನಾನು ಮತ್ತು ನಾನು. ಇದನ್ನು ಸಾಮಾನ್ಯ ಜನ, ಓದುಗರು ಗಮನಿಸುತ್ತಲೇ ಇರುತ್ತಾರೆ. ಸಾಹಿತಿಯ ಬಗ್ಗೆ ಪ್ರೀತಿ ಗೌರವ ಇರದೇ ಹೋದಲ್ಲಿ ಅವನ ಪುಸ್ತಕಕ್ಕೂ ಮಂದಿ ಕೈಹಚ್ಚುವುದಿಲ್ಲ.

ನನಗಂತೂ ಇವತ್ತು ಸಾಹಿತ್ಯಸಾಹಿತಿಗಳು ಎಂದರೆ ತಟ್ಟನೆ ಕಣ್ಣಿಗೆ ಹೊಡೆಯುವುದು ಒಂದರ ಹಿಂದೊಂದರಂತೆ ಪ್ರಕಟವಾಗುವ ಪ್ರಶಸ್ತಿಗಳು, ಶಾರ್ಟ್‌ಲಿಸ್ಟುಗಳು, ಅವುಗಳನ್ನು ಹಿಡಿದು, ಶಾಲು